# ಪರ್ಯಾಯ ವಿವಾದ ನಿರ್ಣಯ ಸಮ್ಮೇಳನ

ಪ್ರಜಾವಾಹಿನಿ–ಆನೇಕಲ್



ಪಟ್ಟಣಕ್ಕೆ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದ ಕಾನೂನೂ ಶಾಲೆಯಲ್ಲಿ ಪರ್ಯಾಯ ವಿವಾದ ನಿರ್ಣಯ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಒರಿಸ್ಸಾ ಹೈಕೋರ್ಟ್ ನ್ಯಾಯಾಧೀಶರಾದ ಸಂಜೀಬ್ ಕುಮಾರ್ ಉದ್ಘಾಟಿಸಿದರು.

ಪರ್ಯಾಯ ವಿವಾದ ನಿರ್ಣಯ ಭವಿಷ್ಯ ಮತ್ತು ಸವಾಲುಗಳು–2022 ಎಂಬ ವಿಷಯದ 26 ಸಂಸ್ಥೆಗಳಿಂದ 80 ಪ್ರಬಂಧಗಳನ್ನು ಮಂಡಿಸಲಾಯಿತು. ಪರ್ಯಾಯ ವಿವಾದ ನಿರ್ಣಯದಲ್ಲಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಯಿತು.

ನ್ಯಾಯಾಧೀಶ ಸಂಜೀಬ್ ಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮಸ್ಯೆಗಳು ಮತ್ತು ವಿವಾದ ಪರಿಹಾರದಲ್ಲಿನ ಬೆಳವಣಿಗೆಗಳನ್ನು ಚರ್ಚಿಸಲು ಕಾನೂನು ಕ್ಷೇತ್ರದಲ್ಲಿ ಕೆಲಸ ಮಾಡುವ ಮನಸ್ಸುಗಳನ್ನು ಉತ್ತೇಜಿಸಲು ಶೈಕ್ಷಣಿಕ ಉದ್ಯಮ ಮತ್ತು ವಿದ್ಯಾರ್ಥಿಗಳಿಗೆ ಸಮ್ಮೇಳನ ವೇದಿಕೆಯಾಗಿದೆ ಎಂದರು.

ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್.ಜಿ. ಚೆಬ್ಬಿ ಮಾತನಾಡಿ, ಕಾನೂನು ವಿದ್ಯಾರ್ಥಿಗಳು ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಬೇಕು. ಈ ಮೂಲಕ ತಮ್ಮ ವೃತ್ತಿ ಜೀವನದಲ್ಲಿ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಅನುಕೂಲವಾಗುತ್ತದೆ. ಯಾವುದೇ ವಿವಾದಗಳನ್ನು ಮಧ್ಯಸ್ಥಿಕೆಯ ಮೂಲಕ ಶಾಂತಿಯುತ ಮತ್ತು ಶಾಶ್ವತವಾಗಿ ಪರಿಹರಿಸಿಕೊಳ್ಳಬಹುದಾಗಿದೆ ಎಂದರು.

ಅಲಯನ್ಸ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಅನುಬಾ ಸಿಂಗ್, ಅಲಯನ್ಸ್ ಕಾನೂನು ಕಾಲೇಜಿನ ಡೀನ್ ಡಾ.ಕಿರಣ್ ಡೆನ್ನಿಸ್ ಗಾರ್ಡ್ನರ್, ಕಾನೂನು ಸಲಹೆಗಾರರಾದ ರೇಷ್ಮಾ ಓಗೋಹಾರ್, ಡಾ.ಪೂರ್ವಿ ಪೋಖಾರಿಯಾಲ್ ಇದ್ದರು.